17 

# ಹೊರಾಂಗಣ

## ಆಕಾರಗಳು

**227**

**ಸೂಚನೆ :** ಕಾರ್ಡಿನಲ್ಲಿರುವ ಕಲಿಸುವ ಕ್ರಮದಂತೆ ಚಟುವಟಿಕೆ ಮಾಡಿಸುವುದು.

**ಉದ್ದೇಶ :** ವಿವಿಧ ಆಕಾರಗಳನ್ನು ಗುರ್ತಿಸಿ ಹೆಸರನ್ನು ತಿಳಿಯುವುದು.

**ಕಲಿಸುವ ಕ್ರಮ :** △ □ ▭ ○

1. ನೆಲದ ಮೇಲೆ ಗೆರೆ ಎಳೆದು ಆಕಾರ ರಚಿಸುವುದು ಮತ್ತು ಗೆರೆಯ ಮೇಲೆ ಮಕ್ಕಳನ್ನು ನಿಲ್ಲಿಸಿ ಆಕಾರದ ಹೆಸರನ್ನು ಹೇಳುತ್ತಾ ಗೆರೆಯ ಮೇಲೆ ನಡೆಯಲು ಹೇಳುವುದು.
2. ಆಕಾರದ ಮೂಲೆಗಳಲ್ಲಿ ಮಕ್ಕಳನ್ನು ನಿಲ್ಲಿಸಿ ಎಷ್ಟು ಮೂಲೆಗಳಿವೆ ಎಂದು ಹೇಳುವುದು. ಆಕಾರದ ಹೆಸರನ್ನು ಹೇಳುತ್ತಾ ಮೂಲೆಯಿಂದ ಮೂಲೆಗೆ ನೆಯುವುದು.
3. ಚೌಕ ಮತ್ತು ಆಯತಕ್ಕಿರುವ ವ್ಯತ್ಯಾಸ ತಿಳಿಸುವುದು.
4. '4' ಮಕ್ಕಳನ್ನು ಕರೆ □ ▭ ಆಕಾರದಲ್ಲಿ ನಿಲ್ಲಲು ಸೂಚನೆ ನೀಡಿ ಚಟುವಟಿಕೆ ಮಾಡಿಸುವುದು.
5. ○ ಕ್ಕೆ ಮೂಲೆಗಳಿಲ್ಲ ಎಂದು ತಿಳಿಸುವುದು.

17

# ಕ್ರಾಫ್ಟ್

228

**ಉದ್ದೇಶ** : ಆಕಾರದಿಂದ ಚಿತ್ರ ಮಾಡಿಸುವುದು.

**ಸಾಮಗ್ರಿ** : ವೃತ್ತ, ಆಯತ, ಚೌಕ, ತ್ರಿಭುಜ, ಈ ಆಕರದ ಬೇರೆ ಬೇರೆ ಬಣ್ಣದ ಹಾಳೆಯ ಕಾಗದದ ಚೂರುಗಳು, ಅಂಟು, ಬಿಳಿಯ ಹಾಳೆ.

**ವಿಧಾನ** : ವಿವಿಧ ಆಕಾರದ ಬಣ್ಣದ ಕಾಗದವನ್ನು ಬಳಸಿ ಮರ, ಮನೆ, ಬೆಟ್ಟ, ಸೂರ್ಯ, ಹುಡುಗ, ಹುಡುಗಿ ಇತ್ಯಾದಿ ಚಿತ್ರಗಳ ಬರುವಂತೆ ಅಂಟಿಸುವ ಚಟುವಟಿಕೆ ಮಾಡಿಸುವುದು. ಸಿದ್ಧ ಪಡಿಸಿದ ಚಟುವಟಿಕೆಯ ಹಾಳೆಯ ಮೇಲೆ ಮಕ್ಕಳ ಹೆಸರನ್ನು ಬರೆದು ಪ್ರದರ್ಶನಕ್ಕೆ ಇಡುವುದು.

ಈ ಚಟುವಟಿಕೆಯಿಂದ ಸಿದ್ಧಪಡಿಸಿದ ಚಿತ್ರಗಳನ್ನು ಹಾಳೆಗಳಲ್ಲಿನ ಎತ್ತರ ಎತ್ತರ-ಕುಳ್ಳ, ಸಣ್ಣ-ದಪ್ಪ, ದೊಡ್ಡದು-ಚಿಕ್ಕದು, ಮೇಲೆ-ಕೆಳಗೆ, ಎಡ-ಬಲ-ಮಧ್ಯೆ ಹಾಗೂ ಆಕಾರಗಳ ಪರಿಚಯ ಈ ಸಾಮರ್ಥ್ಯಗಳ ಕಲಿಕೆ ಮತ್ತು ಮೌಲ್ಯಮಾಪನಕ್ಕೆ ಬಳಸಬೇಕು.

17



# ಆಕೃತಿಗಳ ಪರಿಚಯ

229

**ಉದ್ದೇಶ :** ವಿವಿಧ ಆಕಾರಗಳು ಮತ್ತು ಅವುಗಳ ಹೆಸರನ್ನು ಕಲಿಸುವುದು.

**ಸಾಮಗ್ರಿ :** ಗಣಿತದ  ಕಿಟ್‌ನಲ್ಲಿರುವ ಈ ಆಕಾರಗಳ ಆಕೃತಿಗಳು.

**ಕಲಿಸುವ ಕ್ರಮ :**

1. ಒಂದೊಂದು ಆಕಾರಗಳನ್ನು ತೋರಿಸಿ ಹೆಸರು ಹೇಳಿ ಪರಿಚಯಿಸುವುದು.
2. ಒಂದು ವಸ್ತುವನ್ನು ತೋರಿಸಿ ಅದು ಯಾವ ಆಕಾರದಲ್ಲಿದೆ ಎಂದು ಹೇಳುವುದು ಮತ್ತು ತಾವು ನೋಡಿರುವ ಅದೇ ಆಕಾರದ ವಸ್ತುಗಳನ್ನು ಹೆಸರಿಸಲು ಹೇಳುವುದು.
3. ಗಣಿತದ ಕಿಟ್‌ನಲ್ಲಿರುವ ಆಕಾರದ ಮಾದರಿಗಳನ್ನು ಆಕಾರಕ್ಕೆ ತಕ್ಕಂತೆ ಜೊತೆ ಮಾಡಿ ತೋರಿಸುವುದು.
4. ಬೆಂಕಿ ಕಡ್ಡಿಯ ಸಹಾಯದಿಂದ ಆಕಾರದ ಮಾದರಿಯನ್ನು ನಕಲು ಮಾಡಿಸುವುದು.
5. ಆಕಾರಗಳನ್ನು ಬಳಸಿ ಪೆನ್ಸಿಲ್ ಸಹಾಯದಿಂದ ನಕಲು ಮಾಡಿಸುವುದು.

**ಶಿಕ್ಷಕರ ಗಮನಕ್ಕೆ :** ಮೇಲೆ ನೀಡಿರುವ ಕಲಿಸುವ ಕ್ರಮದಂತೆ ಕಲಿಕಾಂಶಾದ ಮನವರಿಕೆ ಆದ ನಂತರ ಮೇಲಿನ ಆಕೃತಿಗಳನ್ನು ನೋಟ್‌ಪುಸ್ತಕದಲ್ಲಿ ಬರೆಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.



# ಮೌಲ್ಯಮಾಪನ



ರೈಲಿನಲ್ಲಿರುವ ವೃತ್ತ, ತ್ರಿಭುಜ, ವರ್ಗ, ಆಯತ ಆಕೃತಿಗಳನ್ನು ಎಣಿಸಿ ನಿನ್ನ ಸ್ನೇಹಿತನಿಗೆ ಹೇಳು ಹಾಗೂ ನಿನ್ನ ನೋಟ್‌ಪುಸ್ತಕದಲ್ಲಿ ಬರೆ.




1. ರೈಲು ಬೋಗಿಗಳ ಒಳಗಿರುವ ತ್ರಿಭುಜಗಳ ಸಂಖ್ಯೆ ಎಷ್ಟು ?

2. ರೈಲು ಬೋಗಿಗಳ ಒಳಗಿರುವ ಒಟ್ಟು ಚೌಕಗಳ ಸಂಖ್ಯೆ ಎಷ್ಟು ?

3. ರೈಲು ಬೋಗಿಗಳ ಒಳಗಿರುವ ವೃತ್ತಗಳನ್ನು ಎಣಿಸಿ ಹೇಳು ?

4. ರೈಲು ಬೋಗಿಗಳಲ್ಲಿ ಒಟ್ಟು ಆಯತಗಳೆಷ್ಟಿವೆ ?

17



# ಮೌಲ್ಯಮಾಪನ

## ಆಕೃತಿ

234

**ಸೂಚನೆ :** ವಿವಿಧ ಆಕೃತಿಗಳನ್ನು (ತ್ರಿಭುಜ, ಚೌಕ, ಆಯತ, ವೃತ್ತ) ನೋಟ್ ಪುಸ್ತಕದಲ್ಲಿ ಬರೆ.



18

# ವಾರದ ದಿನಗಳ ಪರಿಚಯ

235

**ಸೂಚನೆ :** ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ, ಈ ಹಂತಕ್ಕೆ ಬ ಸರಳ ಅಭಿನಯದ ಮೂಲಕ ಹಾಡನ್ನು ಹೇಳಿಕೊಟ್ಟು ಹೇಳಿಸುವುದು.

ವಾರಕೆ ಏಳೇ ಏಳುದಿನ

ಭಾನುವಾರವೆ ರಜಾದಿನ

ಸೋಮವಾರ ಚೆಣ್ಣೆದಾಂಡು

ಮಂಗಳವಾರ ವಾಲಿಬಾಲು

ಬುಗುರಿಯ ಆಟವು ಬುಧವಾರ

ಗೋಲಿ ಆಟವು ಗುರುವಾರ

ಶುಕ್ರವಾರೆ ಲಗೋರಿ ಚಂಡು

ಶನಿವಾರಕ್ಕೆ ಕ್ರಿಕೇಟು ದಾಂಡು

ವಾರಕೆ ಏಳೇ ಏಳುದಿನ

ಆಟಕೆ ಸಾಲದು ರಜಾದಿನ

18



# ಕಾಲ - ಸಮಯ - ವಾರದ ದಿನಗಳು
# ಬೆಳಿಗ್ಗೆ - ಮದ್ಯಾಹ್ನ - ಸಾಯಂಕಾಲ

236

**ಉದ್ದೇಶ :** ವಾರದ ದಿನಗಳನ್ನು ಕ್ರಮವಾಗಿ ಹೇಳುವುದು ಮತ್ತು ಯಾವ ವಾರದ ನಂತರ ಯಾವ ವಾರ ಬರುತ್ತದೆ ಮತ್ತು ಹಿಂದಿನ ಮತ್ತು ಮುಂದಿನ ವಾರಗಳನ್ನು ಹೇಳುವ ಸಾಮರ್ಥ್ಯ ಬೆಳೆಸುವುದು.

**ಸಾಮಗ್ರಿ :** ವಾರದ ದಿನಗಳ ಪ್ರತ್ಯೇಕ ಮಿಂಚುಪಟ್ಟಿಗಳು. (ಉದಾ. ಭಾನುವಾರ, ಸೋಮವಾರ..)

**ಕಲಿಸುವ ಕ್ರಮ :**

**I.** 1. ಶಿಕ್ಷಕರು ಮಗುವನ್ನು ಉದ್ದೇಶಿಸಿ 'ಈ ದಿನ ಯಾವ ವಾರ ?' ಎಂದು ಪ್ರಶ್ನಿಸಿ ಉತ್ತರ ಪಡೆದು ಮಗು ತಿಳಿಸಿದ ದಿನದ ಮಿಂಚುಪಟ್ಟಿಯನ್ನು ಇಡುವುದು. ವಾರದಲ್ಲಿ ಏಳು ದಿನಗಳು ಎಂದು ವಿವರಸಿ, ಎಲ್ಲ ದಿನಗಳನ್ನು ಕ್ರಮವಾಗಿ ಹೇಳಿಸಿ ಧೃಢಪಡಿಸುವುದು.

2. ಈ ದಿನ ........ ವಾರ ಎಂಬ ಮಿಂಚುಪಟ್ಟಿ ಇಟ್ಟು, ಈ ವಾರದ ಹಿಂದಿನ ದಿನದ ಮತ್ತು ಮುಂದಿದ ದಿನದ ಮಿಂಚುಪಟ್ಟಿ ಇಟ್ಟು ಹಿಂದಿನ / ಮುಂದಿನ ದಿನ ಪರಿಚಯಿಸುವುದು.

3. ಇದೇ ರೀತಿ ಬೇರೆ ಒಂದು ಹೆಸರಿನ ಮಿಂಚುಪಟ್ಟಿ ಇಟ್ಟು, ಹಿಂದಿನ ಮತ್ತು ಮುಂದಿನ ದಿನಗಳನ್ನು ಹೆಸರಿಸಿ ಮಿಂಚುಪಟ್ಟಿ ಇಟ್ಟು ಕಲಿಸುವುದು.

ಚಿತ್ರ :

| | | |
|---|---|---|
| ಹಿಂದಿನ ದಿನ | | ಶನಿವಾರ |
| | | ↑ |
| ಈ ದಿನ | → | ಭಾನುವಾರ |
| | | ↓ |
| ಮುಂದಿನ ದಿನ | | ಸೋಮವಾರ |

**II**

★ ಶಿಕ್ಷಕರು ಮಗುವನ್ನು ಈಗ ಬೆಳಿಗ್ಗೆ, ಮಧ್ಯಾಹ್ನ ಅಥವಾ ಸಾಯಂಕಾಲವೇ ? ಎಂದು ಪ್ರಶ್ನಿಸಿ ಉತ್ತರ ಪಡೆಯುವುದು.

★ ದಿನನಿತ್ಯ ನಿರ್ವಹಿಸುವ ಕಾರ್ಯಗಳ ಆಧಾರದ ಮೇಲೆ, ಸಮಯದ ಕಲ್ಪನೆ ಮೂಡಿಸುವುದು. ನೀನು ಶಾಲೆಯಿಂದ ಮನೆಗೆ ಯಾವಾಗ ಹೋಗುತ್ತೀಯೇ ? ಮೇಯಲು ಹೋದ ದಿನಗಳು ಯಾವಾಗ ಮನೆಗೆ ಹಿಂತಿರುಗತ್ತೇ. ಮನೆಯಲ್ಲಿ ದೀಪಗಳನ್ನು ಯಾವಾಗ ಬೆಳಗಿಸುತ್ತೇವೆ.
ಶಾಲೆಯಲ್ಲಿ ಬಿಸಿಯೂಟವನ್ನು ಯಾವಾಗ ನೀಡುತ್ತಾರೆ ?
ಆಟಆಡಲು ಯಾವ ಸಮಯ ಸೂಕ್ತ ?

18



# ಮೌಖಿಕ ಲೆಕ್ಕಗಳು

## ಸಮಯ

239

★ ಒಂದು ವಾರಕ್ಕೆ ಎಷ್ಟು ದಿನಗಳು ?

★ ನಿಮ್ಮ ಶಾಲೆಯಲ್ಲಿ ರಜಾದಿನ ಯಾವುದು ?

★ ವಾರದ ಮೊದಲ ದಿನ ಯಾವುದು ?

★ ನೀನು ಶಾಲೆಗೆ ಯಾವಾಗ ಹೊರಡುತ್ತೀಯಾ ?

★ ನೀನು ಪ್ರತಿ ದಿನ ಯಾವಾಗ ಆಟ ಆಡುತ್ತೀಯಾ ?

★ ನಿಮ್ಮ ಶಾಲೆಯಲ್ಲಿ ಅಕ್ಷರ ದಾಸೋಹದ ಊಟ ಯಾವಾ ಹಾಕುತ್ತಾರೆ ?

**ಸೂಚನೆ :** ಶಿಕ್ಷಕರು ಇದೇ ರೀತಿ ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಮಕ್ಕಳಲ್ಲಿ ಈ ಸಾಮರ್ಥ್ಯವನ್ನು ಬೆಳೆಸಲು ಹಲವಾರು ರೀತಿಯ ಪ್ರಶ್ನೆಗಳನ್ನು ತಯಾರು ಮಾಡಿಕೊಳ್ಳುವುದು.

18



# ಮೌಲ್ಯಮಾಪನ
## ಸಮಯ

240

**ಸೂಚನೆ :** ಈ ಗುಂಪಿನಲ್ಲಿರುವ ಹಿರಿಯ ತರಗತಿಯ ವಿದ್ಯಾರ್ಥಿಯು ಈ ಹಂತಕ್ಕೆ ಬಂದ ವಿದ್ಯಾರ್ಥಿಗೆ ಈ ಕೆಳಗಿನ ಪ್ರಶ್ನೆಗಳನ್ನು ಮೌಖಿಕವಾಗಿ ಕೇಳಿ ಉತ್ತರ ಪಡೆಯುವುದು.

1. ಈ ದಿನ ಯಾವ ವಾರ ?
2. ನಾಳೆ ಯಾವ ವಾರ ?
3. ನಿನ್ನೆ ಯಾವ ವಾರ ?
4. ಯಾವ ವಾರದಂದು ಶಾಲೆಗೆ ರಜೆ ಇರುತ್ತದೆ ?
5. ಯಾವ ವಾರದಂದು ಸಾಮೂಹಿಕ ಕವಾಯತು ಮಾಡಿಸಲಾಗುತ್ತದೆ ?
6. ಬುಧವಾರದ ನಂತರ ಯಾವ ವಾರ ಬರುತ್ತದೆ ?
7. ಶುಕ್ರವಾರದ ಹಿಂದಿನವಾರ ಯಾವ ವಾರ ?
8. ನಿಮ್ಮ ಊರಿನಲ್ಲಿ ಯಾವ ದಿವಸ ಸಂತೆ ನಡೆಯುತ್ತದೆ ?
9. ಸೂರ್ಯ ಹುಟ್ಟುವುದು ಯಾವಾಗ ?
10. ಸೂರ್ಯ ಮುಳುಗುವುದು ಯಾವಾಗ ?
11. ಶಾಲೆಯಲ್ಲಿ ಬಿಸಿ ಊಟ ಮಾಡುವುದು ಯಾವಾಗ ?

19



# ಹೊರಾಂಗಣ

## ಉದ್ದಳತೆ (ಗೇಣು, ಮೊಳ, ಮಾರು, ಹೆಜ್ಜೆ )

**241**

**ಉದ್ದೇಶ :** ಗೇಣು, ಮೊಳ, ಮಾರು, ಹೆಜ್ಜೆ ಇವುಗಳ ಪರಿಚಯ ಮಾಡಿಸುವುದು.

**ಕಲಿಸುವ ಕ್ರಮ :**

- ★ ಮೈದಾನದಲ್ಲಿರುವ ಮರದಿಂದ ಮರಕ್ಕೆ / ಗಿಡದಿಂದ ಗಿಡಕ್ಕೆ ಇರುವ ಅಂತರವನ್ನು ಹೆಜ್ಜೆಗಳಲ್ಲಿ ಅಳೆಯುವಂತೆ ಹೇಳಿ ಮಾಡಿಸುವುದು.
- ★ ಉದ್ದನೆಯ ದಾರವನ್ನು ನೀಡಿ ಅದರ ಉದ್ದವನ್ನು ಗೇಣುಗಳಲ್ಲಿ ಅಳೆದು ಎಷ್ಟು ಗೇಣುಗಳಿವೆ ಎಂದು ಹೇಳುವುದು.
- ★ ಇದೇ ರೀತಿ ಶಾಲೆಯ ಮೈದಾನದಲ್ಲಿರುವ ವಸ್ತುಗಳ ಅಳತೆಯನ್ನು ಆಧರಿಸಿ ಗೇಣು, ಮೊಳ, ಮಾರು, ಹೆಜ್ಜೆ ಇವುಗಳನ್ನು ಪರಿಚಯಿಸುವುದು.